ಬೆಂಗಳೂರು
ಮಹಾನಗರ
ಸಾರಿಗೆ ಸಂಸ್ಥೆ

# ಬಿಗ್ ಟ್ರಂಕ್




# ಬಲಗೊಂಡ ಬೆಂಗಳೂರು ನಗರ ಸಾರಿಗೆ

## ಬಿಗ್ ಟ್ರಂಕ್ ಬಸ್ ಸೇವೆಗಳು

**ಭಾರತದ ಬಹುತೇಕ ನಗರಗಳಂತೆ ಬೆಂಗಳೂರಿನಲ್ಲಿನ ನಗರ ಸಾರಿಗೆ ಕೂಡ 'ಗಮ್ಯ ನಿರ್ಧಾರಿತ, ನೇರ ಸೇವೆಗಳು' ಮಾದರಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದೆ. ಹೇಗೆಂದರೆ, ಒಂದು ನಿರ್ದಿಷ್ಟ ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ನೇರವಾಗಿ ಸಂಪರ್ಕ ಕಲ್ಪಿಸುವ ಸೇವೆಗಳು. ಚಿಕ್ಕ ನಗರಗಳಾದರೆ, ಈ ರೀತಿಯ ಸೇವೆ ಅನುಕೂಲಕರ. ಆದರೆ, ನಗರ ಬೆಳೆದಂತೆಲ್ಲಾ ಈ ಮಾದರಿಯ ಸೇವೆಗಳು, ಸಾಮರ್ಥ್ಯ ಕಳೆದುಕೊಳ್ಳುತ್ತಾ ಹೋಗುತ್ತವೆ.**

**ಒಟ್ಟಾರೆ ಮಾರ್ಗಗಳ ಸಂಖ್ಯೆ**

ವಿಶ್ವದಾದ್ಯಂತ ಇತರ ನಗರಗಳಿಗೆ ಹೋಲಿಸಿದಾಗ, ಬೆಂಗಳೂರಿನ ಬಸ್ ಮಾರ್ಗಗಳ ಸಂಖ್ಯೆ ಗಣನೀಯವಾಗಿ ಹೆಚ್ಚು. ಬೆಂಗಳೂರಿನಲ್ಲಿ ಈಗ 2400 ಮಾರ್ಗಗಳಿದ್ದರೆ, ಲಂಡನ್‌ನಲ್ಲಿ 700, ಸಿಯೋಲ್‌ನಲ್ಲಿ 500 ಹಾಗೂ ಶಾಂಗಾಯ್‌ನಲ್ಲಿ 1000 ಬಸ್ ಮಾರ್ಗಗಳಿವೆ. ಈ ನಗರಗಳಲ್ಲಿ ಬಸ್ ಪ್ರಯಾಣಿಕರ ಸಂಖ್ಯೆ ನಮ್ಮಷ್ಟೇ ಇದೆ ಎನ್ನುವುದು ಮುಖ್ಯ

**ಕೆಲ ಮಾರ್ಗಗಳಲ್ಲಿ ಅತ್ಯಲ್ಪ ಸೇವೆ**

ಕಳೆದ ದಶಕದಿಂದೀಚೆಗೆ ತನ್ನ ಬಸ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿರುವ ಬಿ.ಎಂ.ಟಿ.ಸಿ ಈಗ 6605 ಬಸ್‌ಗಳನ್ನು ಹೊಂದಿರುವ ಬಲಿಷ್ಠ ಸಂಸ್ಥೆ. ಈಗಿರುವ 2400 ಬಸ್ ಮಾರ್ಗಗಳನ್ನು ಪರಿಗಣಿಸಿದರೆ, ಸರಾಸರಿ ಒಂದು ಮಾರ್ಗಕ್ಕೆ 2.7 ಬಸ್‌ಗಳನ್ನು ಬಿ.ಎಂ.ಟಿ.ಸಿ ಕಾರ್ಯಾಚರಣೆ ಗೊಳಿಸುತ್ತಿದೆ. ಆದರೆ, ಅಂತಿಮವಾಗಿ ಇದು ನಿರ್ದಿಷ್ಟ ಮಾರ್ಗಗಳಲ್ಲಿ ಕಡಿಮೆ ಸಂಖ್ಯೆಯ ಬಸ್‌ಗಳ ಸೇವೆ ಲಭ್ಯವಾಗುವಂತೆ ಮಾಡುತ್ತದೆ ಅಷ್ಟೆ.

**ವ್ಯವಸ್ಥೆಯ ಸಂಕೀರ್ಣತೆ**

ಮಾರ್ಗಗಳ ಸಂಖ್ಯೆಯ ಹೆಚ್ಚಳವೆಂದರೆ ಒಟ್ಟಾರೆ ಸಾರಿಗೆ ವ್ಯವಸ್ಥೆ ಸಂಕೀರ್ಣವಾಗುವಂತೆ ಮಾಡುವುದು. ಇದರಿಂದಾಗಿ ನಿರ್ವಹಣೆ ಕೂಡ ಕಷ್ಟ. ಅನುಭವಿ ಪ್ರಯಾಣಿಕರಾದರೆ ಅವರು ಕ್ರಮಿಸುವ ನಿಯಮಿತ ಮಾರ್ಗಗಳಲ್ಲಿ ಸಂಚರಿಸುವ ಬಸ್‌ಗಳ ಕುರಿತು ಮಾಹಿತಿ ಹೊಂದಿರುತ್ತಾರೆ. ಆದರೆ, ಹೊಸ ಮಾರ್ಗಗಳ ವಿನ್ಯಾಸ, ಒಂದಿಷ್ಟು ಕಷ್ಟಕರ. ಮತ್ತು ಈ ಮಾರ್ಗಗಳನ್ನು ಬಳಸಲಿರುವ ಹೊಸ ಪ್ರಯಾಣಿಕರಿಗೆ ಇದರಿಂದಾಗಿ ಒಂದಷ್ಟು ನಿರುತ್ಸಾಹ.

**ಬಳಕೆದಾರರಿಗೆ ಮಾಹಿತಿ ನೀಡುವ ಸಮಸ್ಯೆ**

2400 ಮಾರ್ಗಗಳನ್ನು ಆಪರೇಟ್ ಮಾಡುವಾಗ ಬಳಕೆದಾರರಿಗೆ ಬಸ್‌ಸ್ಟಾಪ್‌ಗಳಲ್ಲಿ ರೂಟ್ ಮ್ಯಾಪ್ ಒದಗಿಸುವುದು ಮೊದಲಾದ ದಿನೇ ದಿನೇ ವಿಸ್ತೃತವಾಗುತ್ತಿರುವ ಮಾಹಿತಿ ನೀಡುವುದು ಕಷ್ಟ ಸಾಧ್ಯ. ಸ್ಮಾರ್ಟ್ ಫೋನ್, ಜರ್ನಿ ಪ್ಲಾನರ್ ಮೊದಲಾದ ಅತ್ಯಾಧುನಿಕ ಸಾಧನಗಳನ್ನು ಒದಗಿಸುವುದೂ ಕೂಡ ಬಹಳ ಕಷ್ಟಕರ. ಏಕೆಂದರೆ ವಿಶ್ಲೇಷಿಸಬೇಕಾದ ಮಾಹಿತಿಯ ಗಾತ್ರ ಬಹುದೊಡ್ಡದು.

**ಬಿಗ್ ಬಸ್ ಜಾಲ**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಜಾರಿಗೆ ತರುತ್ತಿರುವ ಮೊಟ್ಟಮೊದಲ ಸೇವೆ ಎಂದರೆ Bangalore Intracity Grid–ಬೆಂಗಳೂರು ಅಂತರ್ನಗರ ಜಾಲ– ಬಿಗ್ ಬಸ್ ಜಾಲ ವ್ಯವಸ್ಥೆ. ನಗರದಾದ್ಯಂತ ಕ್ಷಿಪ್ರಗತಿಯ ಸಾರಿಗೆ ಸೇವೆಗಳನ್ನು ನಗರದ ಎಲ್ಲ ಪ್ರಮುಖ ರಸ್ತೆಗಳಲ್ಲಿಯೂ ಪರಿಚಯಿಸುವುದು.



ಈ ಸೇವಾಜಾಲವು ಪ್ರಯಾಣಿಕರು ಯಾವುದೇ ಒಂದು ಪ್ರಮುಖ ರಸ್ತೆಯಿಂದ ನಗರದ ಇನ್ನಾವುದೇ ಪ್ರಮುಖ ರಸ್ತೆ (ಬಡಾವಣೆ)ಗಾದರೂ ಸುಲಭವಾಗಿ, ವೇಗವಾಗಿ ಮತ್ತು ಪೂರ್ವನಿರ್ಧರಿತ ರೀತಿಯಲ್ಲಿ ಪ್ರಯಾಣಿಸುವುದನ್ನು ಸಾಧ್ಯವಾಗಿಸುತ್ತದೆ.

**ಬಿಗ್ ಬಸ್ ಜಾಲವು 4ರೀತಿಯ ಸೇವೆಯನ್ನು ಒದಗಿಸುತ್ತದೆ**

**ಬಿಗ್ ಟ್ರಂಕ್ ಜಾಲ** : ಇದು ಬೆಂಗಳೂರಿನ 12 ಅಂತರರಸ್ತೆಗಳಿಗೆ ವೇಗದ ಸೇವೆ ಕಲ್ಪಿಸುತ್ತದೆ.

**ಬಿಗ್ ಸರ್ಕಲ್** : ಬೆಂಗಳೂರಿನ ಔಟರ್‌ರಿಂಗ್ ರಸ್ತೆಯಲ್ಲಿ ವೃತ್ತ ರೂಪದ ಸೇವೆ ಒದಗಿಸುತ್ತದೆ.

**ಬಿಗ್ ಸಿಟಿ** : ಅತ್ಯಂತ ಬೇಡಿಕೆಯಿರುವ ಮತ್ತು ಅತಿ ಹೆಚ್ಚು ಜನಸಾಂದ್ರತೆಯಿರುವ, ರಿಂಗ್‌ರಸ್ತೆಯ ಪರಿಧಿಯ ಒಳಗಿರುವ ಪ್ರದೇಶಗಳಿಗೆ ವೇಗದ ಸೇವೆ ಒದಗಿಸುತ್ತದೆ.

**ಬಿಗ್ ಕನೆಕ್ಟ್** : ಔಟರ್‌ರಿಂಗ್ ರಸ್ತೆಯ ಪರಿಧಿಯ ಹೊರಗಿರುವ ರಸ್ತೆ – ಪ್ರದೇಶಗಳಿಗೆ ಕ್ಷಿಪ್ರ ಸೇವೆ ಕಲ್ಪಿಸುತ್ತದೆ.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಮಾರ್ಗ ಮತ್ತು ಜಾಲ ವ್ಯವಸ್ಥೆಯಲ್ಲಿ ಎರಡು ಪ್ರಮುಖ ಸುಧಾರಣೆಗಳನ್ನು ಜಾರಿಗೆ ತರಲು ಯೋಜಿಸುತ್ತಿದೆ. ಇದರಿಂದಾಗಿ ಬೆಂಗಳೂರು ನಿವಾಸಿಗಳಿಗೆ ಸರಳವಾದ, ಆದರೆ ಅತ್ಯುತ್ತಮವಾದ ಸಾರಿಗೆ ಸೇವೆ ದೊರೆಯಲಿದೆ. ಈ ಸುಧಾರಣೆಯ ಮುಖ್ಯ ಗುರಿ ಈಗಿರುವ **'ಗಮ್ಯ ನಿರ್ಧರಿತ, ನೇರ ಸೇವೆಗಳು'** ಮಾದರಿಯಿಂದ **'ದಿಕ್ಕು ನಿರ್ಧರಿತ ಸಮಗ್ರ ಸೇವೆಗಳ'** ಮಾದರಿಗೆ ಬದಲಾವಣೆ ಹೊಂದುವುದು. ಬಿಗ್ 10 ಮತ್ತು ಕೆ ಸಿರೀಸ್ ಬಸ್ ಸೇವೆಗಳೇ ಬಿಗ್ ಬಸ್ ಜಾಲದ ಮೂಲ ಸ್ಫೂರ್ತಿ.




ಈ ಸೇವೆಗಳು, ಬೆಂಗಳೂರಿನ ಸಾರಿಗೆ ವ್ಯವಸ್ಥೆಯನ್ನು 'ಗಮ್ಯ ನಿರ್ಧರಿತ' ಮಾದರಿಯಿಂದ 'ದಿಕ್ಕು ನಿರ್ಧರಿತ' ಮಾದರಿಗೆ ಬದಲಿಸುವ ಮೊದಲ ಹೆಜ್ಜೆಯಾಗಿತ್ತು. ಪ್ರಯಾಣಿಕರ ಸಂಖ್ಯೆ ಮತ್ತು ಬಸ್ ಪ್ರಯಾಣಿಕರ ಬೆಂಬಲದ ದೃಷ್ಟಿಗಳೆರಡರಿಂದಲೂ ಈ ಸೇವೆಗಳು ಅಭೂತಪೂರ್ವ ಯಶಸ್ಸು ಕಂಡಿದ್ದವು. ಈ ದೃಷ್ಟಿಯಲ್ಲಿ ಬಿಗ್ ಬಸ್ ಜಾಲವು **'ದಿಕ್ಕು ನಿರ್ಧರಿತ'** ಪರಿಕಲ್ಪನೆಯನ್ನು, ಸರಿಯಾಗಿ ಅರ್ಥೈಸಿಕೊಂಡು ಅದನ್ನು ಇಡೀ ನಗರಕ್ಕೆ ಅನ್ವಯಿಸುವ ನಿಟ್ಟಿನಲ್ಲಿ ಇಟ್ಟ ದಿಟ್ಟ ಹೆಜ್ಜೆ.

**ಹೊಸೂರು ರಸ್ತೆ – ಕಾರಿಡಾರ್**

ಬಿಗ್ ಬಸ್ ಜಾಲ ಮತ್ತು ಹೊರವಲಯ ಸಂಪರ್ಕ ಸೇವೆಗಳನ್ನು ಪ್ರಥಮವಾಗಿ ಹೊಸೂರು ಮತ್ತು ಸುತ್ತಮುತ್ತಲ ರಸ್ತೆ ಜಾಲವನ್ನು ಸಂಪರ್ಕಿಸುವ ವ್ಯವಸ್ಥೆಯನ್ನಾಗಿ ಪರಿಚಯಿಸಲಾಗುತ್ತಿದೆ. ಹೊಸೂರು ರಸ್ತೆಯಲ್ಲಿ ಪರಿಚಯಿಸಲಾಗುವ ಕಾರಿಡಾರ್‌ನಲ್ಲಿ 6 ಮಾರ್ಗಗಳಿರುತ್ತವೆ. ಇವುಗಳಲ್ಲಿ 3 ಮಾರ್ಗಗಳು.







**ಬಿಗ್ ಟ್ರಂಕ್ ಸೇವೆಗಳು**

**ಕೆಬಿಎಸ್–3ಇ ಕೆಂಬನಿ ಯಿಂದ ಹೊಸೂರು ರಸ್ತೆಯ ಮೂಲಕ ಎಲೆಕ್ಟ್ರಾನಿಕ್ ಸಿಟಿ**

**ಕೆಬಿಎಸ್–3ಸಿ ಕೆಂಬನಿ ಯಿಂದ ಹೊಸೂರು ರಸ್ತೆಯ ಮೂಲಕ ಚಂದಾಪುರ**

**ಕೆಬಿಎಸ್–3ಎ ಕೆಂಬನಿ ಯಿಂದ ಹೊಸೂರು ರಸ್ತೆಯ ಮೂಲಕ ಅತ್ತಿಬೆಲೆ**

ಈ ರೂಟ್ ನಂಬರ್‌ನ ವ್ಯವಸ್ಥೆ ತುಂಬ ತಾತ್ವಿಕ ಮತ್ತು ಅರ್ಥಪೂರ್ಣ. ಇಲ್ಲಿ ಮೂರು ಭಾಗಗಳಿವೆ.

ಮೊದಲ ಭಾಗ ಈ ಮಾರ್ಗ ಸೇವೆ ಸಲ್ಲಿಸುವ ನಗರದ ಕೇಂದ್ರವನ್ನು ಗುರ್ತಿಸುತ್ತದೆ. ಈ ಪ್ರಕರಣದಲ್ಲಿ ಸೇವೆ ಸಲ್ಲಿಸುವ

ಕೇಂದ್ರ – ಕೆಂಬನಿ

ಎರಡನೇ ಭಾಗ 3. ಈ ಬಸ್ ಪ್ರಯಾಣಿಸುವ ಪ್ರಮುಖ ರಸ್ತೆಯನ್ನು ಇದು ಗುರ್ತಿಸುತ್ತದೆ. ಇಲ್ಲಿ ಇದು ಹೊಸೂರು ರಸ್ತೆ. ಬೆಂಗಳೂರಿನ ಎಲ್ಲ ಪ್ರಮುಖ ರಸ್ತೆಗಳಿಗೆ ಈಗ ಬಿಗ್10 ವ್ಯವಸ್ಥೆಯಲ್ಲಿರುವಂತೆ 1 ರಿಂದ 12 ರ ವರೆಗೆ ನಂಬರ್‌ಗಳನ್ನು ನೀಡಲಾಗುತ್ತದೆ. ಹೊಸೂರು ರಸ್ತೆಯ ನಂ 3.

ಇನ್ನು ಮೂರನೇ ಭಾಗ ಹೊಸೂರು ರಸ್ತೆಯಲ್ಲಿನ ಗಮ್ಯದ ಹೆಸರಿನ ಮೊದಲಕ್ಷರವನ್ನು ಇದು ಸೂಚಿಸುತ್ತದೆ. ಇ ಎಂದರೆ ಎಲೆಕ್ಟ್ರಾನಿಕ್ ಸಿಟಿ, ಸಿ ಎಂದರೆ ಚಂದಾಪುರ ಮತ್ತು ಎ ಎಂದರೆ ಅತ್ತಿಬೆಲೆ.

ಉಳಿದ ಮೂರು ಬಿಗ್ ಬಸ್ ಜಾಲ ರೂಟ್‌ಗಳು ಬಿಗ್ ಕನೆಕ್ಟ್ ಮಾದರಿಯವು. ಹೊಸೂರು ರಸ್ತೆಯ ಎರಡೂ ಪಕ್ಕದ ರಸ್ತೆಗಳಾದ ಬನ್ನೇರುಘಟ್ಟ ರಸ್ತೆ ಮತ್ತು ಸರ್ಜಾಪುರ ರಸ್ತೆಯ ಎಲ್ಲ ಸಂಪರ್ಕ ರಸ್ತೆಗಳಿಗೂ ಇವು ಸಂಪರ್ಕ ಕಲ್ಪಿಸುತ್ತವೆ.

## ಈಗ ಜಾರಿಯಲ್ಲಿರುವ ಮತ್ತು ಪ್ರಸ್ತಾಪಿತವಾಗಿರುವ ಮಾರ್ಗ ಸಂಖ್ಯೆಗಳ ವಿವರ

| | EXISTING | | | NEW | | |
|---|---|---|---|---|---|---|
| | KBS-ATB | KBS-CND | KBS-ELC | KBS-ATB | KBS-CND | KBS-ELC |
| **SCHEDULES** | 49 | 6 | 5 | 44 | 8 | 10 |
| **VEHICLE UTILIZATION** | 241 | 259.2 | 133.1 | 270 | 241 | 223 |
| **CREW UTILIZATION** | 6.00 | 6.25 | 6.12 | 7.00 | 7.00 | 7.00 |
| **FREQUENCY** | | | | 5 Min | 25 Min | 20 Min |
| **TRIPS** | | | | | | |
| KBS-ATB | | 121 | | | 138 | |
| ATB-KBS | | 119 | | | 138 | |
| TOTAL TRIPS | | 240 | | | 276 | |
| KBS-CND | 20 | | | 32 | | |
| CND-KBS | 17 | | | 32 | | |
| TOTAL TRIPS | 37 | | | 64 | | |
| KBS-ELC | 16 | | | 46 | | |
| ELC-KBS | 18 | | | 42 | | |
| TOTAL TRIPS | 34 | | | 88 | | |

## ಬಸ್ಸಿನ ಪ್ರಧಾನ ಲಕ್ಷಣಗಳು

| | |
|---|---|
| ಪ್ರಯಾಣಿಕರ ಆಸನಗಳು | ಅತ್ಯಾಧುನಿಕವಾಗಿ ವಿನ್ಯಾಸಗೊಳಿಸಿದ ಫೋಮ್ ಸಹಿತ ಪ್ಲಾಸ್ಟಿಕ್ ಆಸನಗಳು 42 + 1 ಡ್ರೈವರ್ |
| ಗವಾಕ್ಷಿಗಳು | ಡ್ರೈವರ್‌ನ ತಲೆಯ ಮೇಲೂ ಸೇರಿದಂತೆ ಮೇಲೆತ್ತಬಹುದಾದ ಮತ್ತು ತುರ್ತು ಸ್ಥಿತಿಯ ಮೂರು ಹ್ಯಾಚ್ ಬಾಗಿಲುಗಳು. ಬಸ್‌ನಲ್ಲಿ ಗಾಳಿ ಸಂಚಾರಕ್ಕನುವಾಗುವಂತೆ ಎಲೆಕ್ಟ್ರಿಕ್ ಫ್ಯಾನ್ |
| ತುರ್ತು ನಿರ್ಗಮನ | ಅರ್ಬನ್ ಬಸ್ ಬಾಡಿ ನಿರ್ದೇಶನದಂತೆ ತುರ್ತು ಪರಿಸ್ಥಿತಿಗಳಲ್ಲಿ ನಿರ್ಗಮಿಸಲು ತುರ್ತು ಬಾಗಿಲುಗಳು. |
| ಬಾಗಿಲುಗಳು | ಅರ್ಬನ್ ಬಸ್ ಬಾಡಿ ನಿರ್ದೇಶನದಂತೆ ಸ್ವಯಂಚಾಲಿತ ಎರಡು ವಿಶಾಲ ಬಾಗಿಲುಗಳು |
| ಕಿಟಕಿಗಳು | ವಿಶಾಲವಾದ ಗಾಜುಗಳಿಂದಾವೃತವಾದ, ಸ್ಪಷ್ಟ ನೋಟಕ್ಕೆ ಅನುವಾಗುವ ಸುಂದರ ಕಿಟಕಿಗಳು. |
| ಮುಂದಿನ ವಿಂಡ್‌ಷೀಲ್ಡ್ | ಚಾಲಕನಿಗೆ ಅನುಕೂಲವಾಗುವಂತೆ ವಿಶಾಲವಾದ ವಿಂಡ್‌ಷೀಲ್ಡ್ |
| ಬಸ್‌ನ ಬಾಡಿ ಮತ್ತು ಬಣ್ಣ | ಆಧುನಿಕವಾದ ಆಕರ್ಷಕ ಬಣ್ಣ ಮತ್ತು ಗ್ರಾಫಿಕ್ ಡಿಸೈನ್. |

**ಯೋಜನೆಯ ಪರಿಣಾಮಗಳು :**

ಬೆಂಗಳೂರಿನ ಅತ್ಯಂತ ಪ್ರಮುಖ ಸಂಪರ್ಕ ಕಾರಿಡಾರ್ ಆದ ಹೊಸೂರು ರಸ್ತೆಗುಂಟ ಈ ಎಲ್ಲ ಸುಧಾರಣೆಗಳು ಅಂದರೆ ಬಿಗ್ ಬಸ್ ಜಾಲ, ಸಂಪರ್ಕ ಸೇವೆಗಳು ಮತ್ತು ಇತರ ಎಲ್ಲ ಮೂಲಭೂತ ಸೇವೆಗಳನ್ನು ಜಾರಿಗೆ ತರಲಾಗುವುದು.

ಒಟ್ಟಾರೆ ಸುಧಾರಿತ ನಿರ್ವಹಣೆ ಮತ್ತು ನಿಯಂತ್ರಣದಲ್ಲಿ ಆಪರೇಟ್ ಆಗುವ 262 ಬಸ್‌ಗಳನ್ನು ಈ ಯೋಜನೆಯಲ್ಲಿ ರಸ್ತೆಗಿಳಿಸಲಾಗುತ್ತಿದೆ. ಇದರಿಂದಾಗಿ ನಿತ್ಯ ಪಯಣಿಸುವ ಸುಮಾರು 2,15,000 ಪ್ರಯಾಣಿಕರ ಕಾಯುವ ಅವಧಿಯ ಶೇ. 56 ರಷ್ಟು ಸಮಯ ಮತ್ತು ಶೇ. 53 ರಷ್ಟು ಮಾರ್ಗ ಸಂಖ್ಯೆಗಳ ಉಳಿತಾಯವಾಗುತ್ತದೆ.

ಬಸ್‌ಗಳು ಹೊಸೂರು ರಸ್ತೆಯ ಕಾರಿಡಾರ್‌ನಾದ್ಯಂತ ಸಂಚರಿಸುತ್ತಾ ಕ್ಷಿಪ್ರಗತಿಯ ಸೇವೆ ಒದಗಿಸಲಿವೆ. ಇದರಿಂದಾಗಿ ಪ್ರತಿನಿತ್ಯ 80,000 ಪ್ರಯಾಣಿಕರಿಗೆ ಪ್ರಯಾಣ ಸಮಯದಲ್ಲಿ ಉಳಿತಾಯ, ಸುಲಭ ಮತ್ತು ಸರಳ ಪ್ರಯಾಣ ಹಾಗೂ ಸುಧಾರಿತ ಪ್ರಯಾಣ ಸೇವೆ ಲಭ್ಯವಾಗಲಿದೆ.

ಈ ಮಾರ್ಗಗಳು ಇಲ್ಲಿನ ಸೇವೆ ಮತ್ತು ಜಾಲ ವ್ಯವಸ್ಥೆ ಯಶಸ್ವಿಯಾಗಲು ಅನುವಾಗುವಂತೆ ಬಿ.ಎಂ.ಟಿ.ಸಿ ಇನ್ನೊಂದಿಷ್ಟು ಪೂರಕ ಪ್ರೋತ್ಸಾಹದಾಯಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿದೆ. ಬಿಗ್ ಬಸ್ ನೆಟ್‌ವರ್ಕ್ ಸೇವೆ ಲಭ್ಯವಿರುವ ಎಲ್ಲ ಬಸ್ ನಿಲ್ದಾಣಗಳಲ್ಲಿ ವಿವರವಾದ ರೂಟ್ ಮ್ಯಾಪ್‌ಗಳು ಮತ್ತು ಇತರ ಸೇವಾ ಮಾಹಿತಿಯನ್ನು ಒದಗಿಸಲಾಗುವುದು. ಈ ಸೇವಾ ಮಾಹಿತಿಯಿಂದಾಗಿ ಪ್ರಯಾಣಿಕರು ತಮ್ಮ ಪ್ರಯಾಣವನ್ನು ಸುಸಜ್ಜಿತ, ಸಮರ್ಥ ರೀತಿಯಲ್ಲಿ ಯೋಜಿಸಲು ಅನುವಾಗುವುದು.

ಬಿಗ್ ಬಸ್ ನೆಟ್‌ವರ್ಕ್‌ನಡಿ, ಆಪರೇಟ್ ಆಗುವ ಎಲ್ಲ ಸೇವೆಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತೆ ಹೊಸ ಏಕ ರೀತಿಯ ಬ್ರಾಂಡಿಂಗ್ ಮಾಡಲಾಗಿದೆ. ಇದರಿಂದಾಗಿ ಪ್ರಯಾಣಿಕರು ಈ ಎಲ್ಲ ಸೇವೆಗಳೂ ಒಂದಕ್ಕೊಂದು ಪೂರಕ ಹಾಗೂ ಬಿ.ಎಂ.ಟಿ.ಸಿಯ ಭಾಗ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗುವುದು.

### ಪ್ರಯಾಣಿಕ ಸ್ನೇಹಿ ಸೌಲಭ್ಯಗಳು

**ಪ್ರಪ್ರಥಮ ಬಾರಿಗೆ ದಿಕ್ಕು ನಿರ್ಧಾರಿತ ಬಸ್ ಸೇವೆಯ ಆರಂಭ**
**ಅತ್ಯಧಿಕ ಪುನರಾವರ್ತನೆಯ ಟ್ರಂಕ್ ಸೇವೆಗಳು**
**ಪ್ರಯಾಣದ ಸಮಯದಲ್ಲಿ ಇಳಿಕೆ**
**ಅಧಿಕ ಲಭ್ಯತೆ**
**ದಿನಂಪ್ರತಿ 80,000 ಪ್ರಯಾಣಿಕರಿಗೆ ಸುದಾರಿತ ಪರವರ್ತನೆಯ ಅನುಭವ**
**ಕಾಯುವ ಸಮಯದಲ್ಲಿ ಇಳಿಕೆ**
**ಬೆಂಗಳೂರಿನ ಪ್ರಾಶಸ್ತ್ಯ ಕಾರಿಡಾರ್‌ಗಳಲ್ಲಿ ಒಂದಾದ ಹೊಸೂರು ರಸ್ತೆಯಲ್ಲಿ ಕಾರ್ಯಾಚರಣೆ**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು

ಸಹಾಯವಾಣಿ : 24x7 ಟೋಲ್ ಫ್ರೀ ಸಂಖ್ಯೆ. 1800 425 1663 www.mybmtc.com